# ದೇವರ ಪೂಜೆ

**(ಕನ್ನಡ ಸ್ತುತಿ ಪದ್ಯಗಳಿಂದ)**

**ರಚನೆ : ಗುರುರಾಜ್ ಬೆಣಕಲ್**

**(ನರಹರಿ )**

**ಪವನ ಶ್ರೀ ಪ್ರಕಾಶನ**

**ಬೆಂಗಳೂರು**

# ದೇವರ ಪೂಜೆ

## ಗುರು ದೇವತಾ ಪ್ರಾರ್ಥನೆ :

ಸಿರಿಗುರು ಪರಮಗುರು ಶ್ರೀ ಮಧ್ವರಾದಿ ಗುರು
ಪರಮ ಕರುಣಾಳುಗಳೆ ನಿಮಗೊಂದಿಸಿ,
ಸಿರಿಹರಿ ಪುಜೆಯನು ತರಳಭಾವದಿ ಮಾಳ್ಪೆ
ಕರುಣೆಯಲಿ ಅನುಗೃಹಿಸಿ ಹರೆಸಿರೆನ್ನ ||

ಪರಿಪೂರ್ಣಗುಣ ಹರಿ ಸಜ್ಜನಕೆ ಜ್ಞಾನ ಝರಿ
ವರ ಸೃಷ್ಟಿ-ಸ್ಥಿತಿ-ಲಯಕೆ ಕರ್ತವಾದ ,
ಸುರ ಅಸುರ ಸುಖದು:ಖಗಳಿಗೆ ಕಾರಣನಾದ
ವ್ಯಾಪ್ತ ನಾರಾಯಣನೆ ನಾ ನಮಿಸುವೆ ||

ನೀನು ಎಂತಿರುವೆಯೋ ಎನಗೆ ಅರಿವಿಲ್ಲ
ನೀನೆ ನನ್ನೊಳು ನೆಲೆಸಿ ನನಗದನು ತಿಳಿಸು,
ನಿನ್ನೊಲುಮೆ ಉಪಾಯ ಎನಗೆ ತಿಳಿದಿಲ್ಲ
ನೀನೆ ನನ್ನೊಳು ಸೇರಿ ನನಗದನು ಕಲಿಸು ||

ನನ್ನಿಂದ ಒಳಿತಾದ ಕಾರ್ಯವನು ಮಾಡಿಸು
ನನ್ನಲ್ಲಿ ಒಳ್ಳೆಯತನವನ್ನೇ ಪ್ರೇರಿಸು
ನನ್ನಲ್ಲಿ ನಿನ್ನಯ ಭಕುತಿಯನು ಮೂಡಿಸು
ನನ್ನಿಂದ ನಿನ್ನಿಂದ ಮಹಿಮೆಯನು ಹಾಡಿಸು ||

ನಾನೋರ್ವ ನಿನ್ನಯ ಸೂತ್ರದ ಬೊಂಬೆ
ನೀನು ಆಡಿಸಿದಂತೆ ಆಡುವೆನು ಎಂಬೆ,
ನಾನು ಇನ್ನೋರ್ವರನು ನಿನ್ನಂತೆ ನಂಬೆ
ನಿನ್ನನೇ ನೆಚ್ಚಿ ನಾ ಆಶ್ರಯಸಿಕೊಂಬೆ ||

ಶ್ರೀ ರಮಣಿ  ಲಕುಮಿಯ ಕರಗಳಿಂದಲಿ ನಿತ್ಯ
ಆರಾಧನೆಯಗೊಳುವ ನರಹರಿ ದೇವ,
ಹರ ಬ್ರಹ್ಮರಾದಿಯಿಂ ಸ್ತುತಿಗೊಳುತಲಿ ಸೃಷ್ಟಿ
ಇರವು, ಪಾಲನೆ, ಮೋಕ್ಷ ಕಾರಣನೆ ನಮಿಪೆ ||

ಸರುವ ದೇವತೆಗಳಿಗೆ ಋಷಿಗಳಿಗೆ ಪಿತೃಗಳಿಗೆ|
ಭೂರಿ ಗಂಧರ್ವರಿಗೆ ಮತ್ತೆ ಕ್ಷಿತಿಪರಿಗೆ ,
ಸಿರಿ ಮಧ್ವರಾದಿ ಏನೆ ಪರಮ ಗುರು ವೃಂದಕ್ಕೆ
ಹರಿದಾಸರಿಗೂ ಶಿರವ ಬಾಗಿ ನಮಿಪೆ ||

## ದ್ವಾರಪಾಲಕರಿಗೆ ನಮಸ್ಕಾರ

ಜಯ-ವಿಜಯ ಬಲ-ಪ್ರಬಲ ನಂದ ಸುನಂದರಿಗೆ
ಕುಮುದ ಕುಮುದಾಕ್ಷರಿಗೆ ನಾ ನಮಿಸುತ,
ಅಷ್ಟ ದಿಕ್ಪಾಲರಿಗೆ ಸಾಷ್ಟಾಂಗಗಳ ಎರಗಿ
ದೇವ ಮನೆ ದ್ವಾರವನು ನಾ ತೆಗೆವೆನು ||

## ದೀಪ ಪ್ರಜ್ವಲನೆ

ಹರಡಿರುವ ತಿಮಿರವನು ಪರಿಹರಿಸು ನೀನೆಂದು
ತ್ವರದಿ  ಜ್ಯೋತಿಯ ತಿದ್ದಿ ಪ್ರಜ್ವಲಿಸುತ,
ಭರದಿಂದ ಶ್ರೀ ಹರಿಗೆ ಕರವ ಜೋಡಿಸುತ
ನಿರವಿಘ್ನಗೊಳಿಸೆಂದು ಪ್ರಾರ್ಥಿಸುವೆನು ||

## ಭೂತೋಚ್ಚಾಟನೆ

ಸಿರಿರಮಣ ಶುಭಚರಣ ಸ್ಮರಣೆ ಮಾಡುತ ಮನದಿ |
ಪರಮ ಭಕ್ತಿಲಿ ಎನ್ನ ಕರ ಜೋಡಿಸಿ,
ಕರದಲಿಹ ಪುಷ್ಪಗಳ ಶ್ರೀಹರಿಗೆ ಅರ್ಪಿಸುತ
ತ್ವರದಿ ಭೂತೋಚ್ಚಾಟನೆ ಗೈವೆ ನಾನು ||

## ಘಂಟಾವಾದನ

ಹರಿಕರೆಗೆ ಸ್ವರವೀವ ಹರಿ ಅರಿಗೆ ಭಯತರುವ
ಪರಮ ಘಂಟಾನಾದ ನಾನು ಗೈವೆ
ಹರಿಪೂಜೆಗಿನ್ನು ಮನ ಪರಿಶುದ್ಧ ವಾಯ್ತೆಂದು
ಪರಮ ಮಂಗಳವನ್ನು ನಾ ಕೋರುವೆ ||

## ಬ್ರಹ್ಮಪಾರ ಸ್ತೋತ್ರ

ಹರಿ ಮತ್ತು ಹರಿಭಕ್ತ ಮಧ್ಯ ಪರದೆಯು ಸರಿದು
ಅರಿವ ಕಂಗಳಲಿಂದ ಪ್ರತಿಮೆಗಳಲಿ,
ಹರಿ ಸನ್ನಿಧಾನವನು ಸ್ಮರಿಸಿಕೊಳ್ಳುತ ಬ್ರಹ್ಮ
ಪಾರ ಸ್ತೋತ್ರವ ಮನದಿ ನಾ ಪಠಿಸುವೆ ||

ಸಂಸಾರ ಬಂಧನದ ವ್ಯಾಮೋಹದಲಿ ಕವಿದ
ಕಂಸಾರಿ ಮರೆವಿನ ಪರದೆ ಸರಿದು ,
ಹಂಸ ನಾಮಕ ಹರಿಯ ಅರಿವ ನೆರವಿಂದಲಿ
ಸಾಂಶ ರೂಪದಿ ಪ್ರತಿಮೆ ನಾ ಅರ್ಚಿಪೆ ||

## ಆವಾಹನ (ಮುದ್ರೆ)

ಮನ್ ಹೃದಯ ಮಂದಿರಕೆ ಚಿನ್ಮಯನೆ ಸ್ವಾಗತಿಪೆ
ಸನ್ಮಾನ ನಿಡುತಲಿ ಮೋದಗೊಳುವೆ,
ಸನ್ನಿಧಾನವಗೊಂಡು ಹೃದಯ ಸಾಮ್ರಾಜ್ಯದಲಿ
ಸನ್ಮಾನ ಗೊಳ್ಳೆಂದು ಪ್ರಾರ್ಥಿಸುವೆನು ||

ಹೃತ್ಕಮಲದಲ್ಲಿರುವ ಚಿತ್ ಕಳಾಮೂರ್ತಿಯೆ
ನುತ ಶಂಖ ಚಕ್ರ ಗಧಾ ಪದ್ಮಧಾರಿ ,
ಆತ್ಮ ಜ್ಞಾನಾನಂದ ಪರಿಪೂರ್ಣ ಶ್ರೀ ಹರಿಯೇ
ಪ್ರೀತಿಯಲಿ ಹೃದಯದಲಿ ಪೀಠಸ್ಥ ಗೊಳ್ಳೋ ||

## ನಿರ್ಮಾಲ್ಯ ವಿಸರ್ಜನೆ (ದೇವರು)

ಶ್ರೀ ಹರಿಯ ಚಲ ಪ್ರತಿಮೆ ವರದ ಸಾಲಿಗ್ರಾಮ
ವರ ಸುದರ್ಶನ, ಚಕ್ರ ವಿಷ್ಣುಪಾದ,
ಪರಿಶುದ್ಧ ಪಾತ್ರೆಯಲಿ ಇರಿಸಿ ಗಂಗಾಜಲದಿ
ನಿರಮಾಲ್ಯದಭಿಷೇಕ ಮುದದಿ ಗೈವೆ ||

## ಶ್ರೀ ಲಕ್ಷ್ಮೀ ಅಭಿಷೇಕ

ಸಿರಿದೇವಿಯೆ ಹೊನ್ನ ಬಣ್ಣದಲಿ ಹೊಳೆಹೊಳೆವ|
ಸರಿಗೆ ಸರ ರತ್ನದಾಭರಣದಿಂ ಮೆರೆವಳೆ
ಪರಮ ಮಂಗಳೆ ನಿನಗೆ ನಿರ್ಮಾಲ್ಯದಭಿಷೇಕ
ತ್ವರದಿ ಗೈವೆನು ಇದನು ಸ್ವೀಕರಿಸು ತಾಯಿ ||

ಆಲೋಚನೆ ಮಾತ್ರದಿಂದಲೇ ಹರಿ ಅರಿವು
ಗಳಿಸುವ ತ್ರಿಗುಣಾಭಿಮಾನಿ ಮಹಾಲಕುಮಿಯೇ,
ಒಳಗೆ ಜಗವನು ಧರಿಸಿ ನಗುತಿಹ ಶ್ರೀಹರಿಯ
ಗಳಿಗೆ ಗಳಿಗೆಗೆ ಹೊಗಳಿ ಹಿಗ್ಗುವಳೆ ನಮನಂ ||

## ವಾಯು ದೇವರ ಅಭಿಷೇಕ

ವರ ವಾಯುಪುತ್ರನೆ ಶ್ರೀರಾಮ ಸೇವಕನೆ
ಓ ರಾಕ್ಷಸಾರಿಯೆ ನಿನಗೊಂದಿಪೆ,
ಹರಿಯ ಪರಮಭಕ್ತ ತ್ವರದಿ ನಿನ್ನಭಿಷೇಕ
ಪರಮ ಭಕ್ತಿಲಿ ಗೈವೆ ಸ್ವೀಕರಿಸು ತಂದೆ ||

ಪ್ರತಿ ಜೀವನಲಿ ನೆಲೆಸಿ ಶ್ವಾಸ ಜಪರೂಪದ
ಸ್ತುತಿ ಹಂಸಮಂತ್ರವ ನೀ ಜಪಿಸುತ,
ಪ್ರತಿ ಜೀವಿಗೆ ಜೀವನ ಪ್ರದನು ಎಂದೆನಿಪ
ನುತ ಹರಿಯ ದಾಸ ವಾಯುವೆ ನಮನಂ ||

## ಶೇಷ ದೇವರ ಅಭಿಷೇಕ

ಭೂಮಿ ತಾಯಿಯ ಶಿರದಿ ಹೊತ್ತುಕೊಂಡವನೆ
ನಮಿಸುತಿಹ ಭಕುತರನು ಪೊರೆಯುವವನೆ,
ಆ ಮಹಾ ಕಾರುಣ್ಯ ನಿಧಿ ಸಿರಿ ರಮಣನ
ಸಮ ಆಸನ ಶೇಷ ದೇವನೇ ನಮನಂ ||

## ಗರುಡ ದೇವರ ಅಭಿಷೇಕ

ಪುರುಷೋತ್ತಮನ ಹೊತ್ತು ಹರುಷದಿಂ ಚರಿಸುತ
ಸಿರಿಹರಿಯ ಪರಿಪರಿ ಕಾರ್ಯಕೆ ಒದಗಿ,
ಭೂರಿ ನಮಿಪ ಭಕುತ ಜನರ ತಾ ಪೊರೆಯುತ್ತ
ಮೆರೆವ ಆ ಗರುಡ ವಾಹನನೆ ನಮನಂ ||

## ಗುರುಗಳ ಅಭಿಷೇಕ

ಓ ರಾಘವೇಂದ್ರರೇ ಓ ಕಲ್ಪವೃಕ್ಷರೇ
ಓ ಕಾಮಧೇನುವೇ ನಿಮಗೊಂದಿಸಿ,
ತ್ವರದಿಂದ ನಿರ್ಮಾಲ್ಯದಭಿಷೇಕವನುಗ್ಯೈವೆ
ಪರಮ ಕರುಣೆಯಿಂದಲಿ ಸ್ವಿಕರಿಸಿ ಗುರುವೆ ||

## ಮಂಟಪ ಧ್ಯಾನ

ಚಿನ್ನ ಮುತ್ತು ರತ್ನ ವಜ್ರ ವೈಡೂರ್ಯಗಳ
ಘನ್ನ ತೇಜದಿ ಹೊಳೆವ ಮಂಟಪದಲಿ,
ಅನ್ನಂತ ಮಹಿಮ ಶ್ರೀಹರಿಯು ಲಕ್ಷ್ಮೀ ಸಹಿತ
ಮುನ್ನ ಶೋಭಿಪರೆಂದು ಧ್ಯಾನಿಸುವೆನು.

ಬಲು ಶೋಭಿಸುವ ಈ ಮಂಟಪದಿ ನೆಲೆನಿಂತು
ಗೆಲುವನೀ ಯುತ ನಿನ್ನ ಪೂಜೆಗೊಳಲು
ನಲಿವಿಂದ ನನ್ನಲ್ಲೆ ನೀನೆ ನೆಲೆಗೊಳ್ಳುತಲಿ
ಒಲವಿತ್ತು ಪೂಜೆಗೊಳು ಸಿರಿ ನಾರಸಿಂಹ ||

ನಿನ್ನ ಪ್ರೇರಣೆಯಿಂದ ನಡೆಯುವದು ಎಲ್ಲವೂ|
ನಿನ್ನ ಪ್ರೇರಣೆ ಇರದೇ ಕ್ರಿಯೆಯೇ ಇಲ್ಲ,
ನೀನೀಗ ನನ್ನೆಲ್ಲ ಇಂದ್ರಿಯಗಳಲಿ ನೆಲೆಸಿ
ಘನ ಪ್ರೇರಣೆಯ ಕೊಡು ಕರುಣೆಯಿಂದ ||

## ಪೂಜಾ ಸಂಕಲ್ಪ (ಷೋಡಶ)

ಭಾರತದಲಿ ಇರುವ ಕನ್ನಡ ನಾಡಿನಲ್ಲಿ
ಎರಡು ಸಾವಿರ ..................ವರ್ಷದಲ್ಲಿ ,
ವರ ಶುಭ ಮಾಸ ಶುಭ ತಿಥಿಯಂದು
ಸಿರಿ ಹರಿಯ ಪೂಜೆಗೆ ಸಂಕಲ್ಪಗೈವೆ ||

ನಿನ್ನ ತೊರೆದು ನಾನು ಏನನ್ನೂ ಮಾಡೆನು
ಏನು ಎಂತು ಏಕೆ ಉಸಿರನ್ನೂ ಆಡೆನು ,
ನೀನೆ ನನ್ನೊಳಗಿದ್ದು ನನ್ನನ್ನು ಪ್ರೇರಿಸು
ನನ್ನಿಂದ ನಿನ್ನಯ ಪೂಜೆಯನು ಮಾಡಿಸು ||

ದಿನ ವಾರ ಮಾಸ ಸಂವತ್ಸರವು ನಿನ್ನಯ
ಘನ ಪ್ರೇರಣೆಯಿಂದ ಆಗುತಲಿಹವು,
ದಿನ ಶುಭ ಇದು ಎಂದೇ ಪೂಜೆ ಆರಂಭಿಪೆ
ಅನುನಯದಿ ಅನುಗ್ರಹಿಸಿ ಪೂಜೆ ಗೊಳ್ಳೋ ||

ಶ್ರೀ ಹರಿಯ ಪ್ರೇರಣೆಗೆ ಶ್ರೀ ಹರಿಯ ಪ್ರೀತಿಗೆ
ಶ್ರೀ ಹಯವದನನಿಗೆ ಹದಿನಾರು ವಿಧದಿ,
ಸ್ನೇಹ ಭಕುತಿಯಲಿಂದ ಸಾಧ್ಯ ವೈಭವದಿಂದ
ಇಹ ಶಕ್ತಿಯಲಿ ಪೂಜೆ ಗೈವೆ ನಾನು ||

## ಕಲಶ ಪೂಜೆ

ಕಲಶ ವದನದಿ ಹರಿ ಕಲಶ ಕಂಠದಿ ಶಿವನು
ಕಲಶ ಮೂಲದಿ ಬ್ರಹ್ಮ ನಡುವಿನಲಿ ಮಾತೃಗಣ
ಒಳಗೆ ಸಾಗರ ಭೂಮಿ ವೇದ ವೇದಾಂತಗಳು
ಒಳಗೊಂಡಿಹವು ಸಕಲ ಎಂದು ತಿಳಿದು ||

ಸಕಲ ತತ್ವಾಭಿಮಾನಿ ದೇವತೆಗಳೆಲ್ಲರಿಗೂ
ಸಕಲಾಕ್ಷರ ಪ್ರತಿಪಾದ್ಯ ಮೂರ್ತಿಗಳಿಗೂ,
ಈ ಕಲಶದಾಹ್ವಾನಿತ ಎಲ್ಲ ದೇವತೆಗಳಿಗೆ
ಈ ಕರಗಳಿಂ ನಮಿಸಿ ಸೇವಿಸುವೆನು ||

ಗಂಗೆ ಸಿಂಧು ಯಮುನೆ ಗೋದೆ ಕಾವೇರಿ ನದಿ
ತುಂಗಭದ್ರೆ ಕಪಿಲೆ ಕೃಷ್ಣೆ ಮೆಯರಾದಿ,
ಮಂಗಳ ಜಲಗಳನು ಕಲಶದೊಳು ಸ್ವಾಗತಿಸಿ
ಮಂಗಳ ಪೂಜೆಯನು ಕಲಶಕೆ ಗೈವೆ ||

## ಶಂಖ ಪೂಜೆ

ಸಾಗರದಲಿ ನೀನು ಸೊಗದಿಂದ ಜನಿಸುತಲಿ
ಜಗದೊಡೆಯನ ಕರಡಿ ಶೋಭಿಸುತ್ತ ,
ಮಿಗೆ ಪಾಂಚಜನ್ಯ ವೆನೆ ಶಂಖ ರೂಪದಿ ಇರುವ
ಜಗನ್ಮಾತೆ ಲಕ್ಷ್ಮಿಗೆ ಅರ್ಚಿಸುವೆನು ||

## ಪೀಠ  ಪೂಜೆ

ಪೂಜೆಗಣಿಗೊಳಿಸಿರುವ ಈ ಅಣು ಪೀಠದಲಿ
ಮೂಜಗದೊಡೆಯ ಶ್ರಿಹರಿಯನು ಚಿಂತಿಸಿ,
ಭಜಿಸುತಲಿ ನಿಂತಿಹರು ಅವನ ಸಂತತಿಯೆಲ್ಲ
ನಿಜವಿದು ಎಂದರಿತು ಪೂಜಿಸುವೆನು ||

## ಆವ್ಹಾಹನ (ಮುದ್ರೆ)

ಮನ್ ಹೃದಯ ಮಂದಿರಕೆ ಚಿನ್ಮಯನೆ ಸ್ವಾಗತಿಪೆ
ಸನ್ಮಾನ ನೀಡುತಲಿ ಕುಳ್ಳಿರಿಸುವೆ,
ಸನ್ನಿಧಾನವಗೊಂಡು ಹೃದಯ ಸಂಸ್ಥಾನದಲಿ
ಸನ್ಮಾನ ಗೊಳ್ಳೆಂದು ಪ್ರಾರ್ಥಿಸುವೆನು ||

ಹೃತ್ ಕಮಲದಲ್ಲಿರುವ ಚಿತ್ ಕಳಾಮೂರ್ತಿಯೆ
ನುತ ಶಂಖ ಚಕ್ರ ಗಧಾ ಪದ್ಮಧಾರಿ,
ಆತ್ಮ ಜ್ಞಾನಾನಂದ ಪರಿಪೂರ್ಣ ಶ್ರೀ ಹರಿಯೆ
ಪ್ರಿತಿಯಲಿ ಹೃದಯದಲಿ ಪೀಠಸ್ಥ ಗೊಳ್ಳೋ ||

## ಷೋಡಶೋಪ ಚಾರ ಪೂಜೆ

**(೧) ಅರ್ಘ್ಯ** (ಕೈಗಳಿಗೆ ನೀರು)

(ದೇವರಿಗೆ ಉದ್ಧರಣೆ ಯಿಂದ ನೀರು ಮುಟ್ಟಿಸಿ ಪಾತ್ರೆಗೆ ಬಿಡಿ)

ಮೂರು ಲೋಕಗಳೊಡೆಯ ಬ್ರಹ್ಮಾದಿಗಳ ಪತಿಯೆ
ಸರುವ ಕಲ್ಯಾಣ ಗುಣಪುರ್ಣ ಶ್ರೀ ಹರಿಯೆ
ಸಿರಿದೇವಿ ಕರದಿಂದ ಅರ್ಘ್ಯವನು ನಿದುತಿಹೆ
ಪರಮ ಸಂತೋಷದಿಂ ಸ್ವೀಕರಿಪುದು ||

**(೨) ಪಾದ್ಯ** (ಪಾದಕ್ಕೆ ನೀರು)

(ದೇವರ ಕೈಗೆ  ಉದ್ಧರಣೆ ಯಿಂದ ನೀರು ಮುಟ್ಟಿಸಿ ಪಾತ್ರೆಗೆ ಬಿಡಿ)

ದೇವ ಪದ್ಮನಾಭ, ವಿಷ್ಣು, ಕಮಲನಯನ
ದೇವ ಮಧುಸೂದನ, ಮಧು ಹಂತಕ,
ಭಾವ ಶುಧ್ಧಿಯಗೊಳಿಪ ಶಾರದೆಯ ಕರದಿಂದ
ಈವೆ ಪಾದ್ಯವ ಸ್ವೀಕರಿಸು ತಂದೆ ||

**(೩) ಆಚಮನ** (ಮುಖಕ್ಕೆ ನೀರು)

(ದೇವರ ಮುಖಕ್ಕೆ   ಉದ್ಧರಣೆ ಯಿಂದ ನೀರು ಮುಟ್ಟಿಸಿ ಪಾತ್ರೆಗೆ ಬಿಡಿ)

ಸರುವ  ಪಾಪವ ಕಳೆವ ಪರಿಶುದ್ಧ ಗಂಗೆಯ
ನೀರನ್ನು ನಿನ್ನಯ ಆಚಮನಕ್ಕಾಗಿ,
ವರರತಿ ಹಸ್ತದಿಂ ಹರಿಯೆ ನಿನಗೀಯುವೆನು
ಗರುವರಹಿತನೆ ಕೊಳ್ಳೋ ಸಂತೋಷದಿಂದ ||

(೪) ಮಧುಪರ್ಕ (ಸೇವಿಸಲು ಸಿಹಿ ನೀರು)

(ದೇವರ ಬಾಯಿಗೆ ಉದ್ಧರಣೆ ಯಿಂದ ನೀರು ಮುಟ್ಟಿಸಿ ಪಾತ್ರೆಗೆ ಬಿಡಿ)

ತ್ರೈಲೋಕಗಳ ಒಡೆಯ ಬ್ರಹ್ಮಾದಿ ದೇವತೆಯ
ಚಲು ಹಸ್ತದಿಂದಲಿ ನಿರ್ಮಿತವು ಆಗಿರುವ,
ಒಲುಮೆಯ ಮಧುಪರ್ಕ ಪಿತಾಮಹ ಹಸ್ತದಿಂ
ನಳುವಿಂದ ನಾ ಕೊಡುವೆ ಸ್ವೀಕರಿಸು ಒಡೆಯ ||

(೫) ಪುನರಾಚಮನ (ಮುಖಕ್ಕೆ ನೀರು)

(ದೇವರ ಬಾಯಿಗೆ ಉದ್ಧರಣೆ ಯಿಂದ ನೀರು ಮುಟ್ಟಿಸಿ ಪಾತ್ರೆಗೆ ಬಿಡಿ)

ಸರುವ ಪಾಪವ ಕಳೆವ ಪರಿಶುದ್ಧ ಗಂಗೆಯ
ಪರಮ ಪವಿತ್ರದಾ ಜಲವನ್ನು ಇದಿಗೊ
ವರ ಶಾಂತಿ ಹಸ್ತದಿಂ ನಿನಗಿವೆ ಸರ್ವೇಶ
ಗರುವಪಡದಲೆ ನೀನು ಸ್ವೀಕರಿಸು ಬಂಧು ||

(೬ ) ಸ್ನಾನ

( ಕಲಶದಲ್ಲಿಯ ನೀರನ್ನು ಘಂಟಾನಾದದೊಂದಿಗೆ ದೇವರಿಗೆ ಅಭಿಷೇಕ )

ನೀನೇನೆ ಪ್ರಥ್ವಿಯು ನೀನೇನೆ ಗಾಳಿಯು
ನೀನೇನೆ ಉದಕವು ನೀನೇನೆ ಜ್ಯೋತಿಯು
ಮನವೃತ್ತಿ ಮಾತ್ರದಿಂ ವರುಣನ ಕರದಿಂದ
ಸ್ನಾನವನು ನಾ ಗೈಪೆ ಸ್ವೀಕರಿಸು ಧೊರೆಯೆ.

ಸಾಸಿರ ಸಿರವಿರುವ ಸಾಸಿರ ಕಂಗಳಿಹ
ಸಾಸಿರ ಪಾದವಿಹ ವಿಶ್ವಭರಿತ ,
ವಸುಧೆ ನೀಲಾಕಾಶದಾಚೆಗೂ ವ್ಯಾಪಿಸಿಹ
ಘನ ಪುರುಷ ಎಲ್ಲವೂ ನೀನೆ ||

ನಿನ್ನೆ ಇಂದು ನಾಳೆ ಎಂದೂ ಇಪ್ಪನು ನೀನೆ
ಘನ ಯಜ್ಞಪತಿ ಯಜ್ಞ ಈಶ ನೀನೆ,
ಮನವೆಲ್ಲ ನೆನೆಯುವ ಘನ ಪುರುಷನು ನೀನೆ
ಅನುನಯದಿ ನಮಿಸುವೆ ಸಲಹೆನ್ನನು ||

ಪರಮ ಶಾಲಿಗ್ರಾಮ ಶಿಲೆಯಲ್ಲಿ ನೆಲೆಸಿರುವ
ಕರುಣಾಮಯಿ ಆದ ನರಹರಿಯೆ ತ್ವರದಿ
ಕರದಲಿಹ ಶ್ರೀಲಕ್ಷ್ಮೀವಾಸ ಶಂಖದಲಿಂದ
ಭರದಿ ಸ್ನಾನವ ಗೈಪೆ ಸ್ವೀಕರಿಸು ಹರಿಯೆ ||

## (7) ವಸ್ತ್ರ ಸಮರ್ಪಣೆ

(ದೇವರಿಗೆ ಗೆಜ್ಜೆ ವಸ್ತ್ರ ಗಳನ್ನು ಸಮರ್ಪಿಸಬೇಕು)

ವೇದಾದಿ ಶಾಸ್ತ್ರದಿಂ ಸಮನ್ವಿತವು ಆದ
ಯದಿ ಯಜ್ಞ  ಸೂತ್ರದಿಂ ನಿರ್ಮಿಸಿರುವ ,
ಮುದ ಚೆನ್ನ ವರ್ಣದಿಂ ಪರಿಶೋಭಿಸುತ್ತಿರುವ
ಯದುಕುಲ ತಿಲಕನೆ ವಸ್ತ್ರ ದ್ವಯ ಅರ್ಪಿಸುವೆ ||

## (೮) ಭೂಷಣ (ಆಭರಣ)

(ಆಭರಣ ಅರ್ಪಿಸುವೆನೆಂದು ತುಳಸಿ ದಳವನ್ನು ಅರ್ಪಿಸಿರಿ)

ದಿವ್ಯ ನಾನಾ ರತ್ನದಿಂದ ಯುಕ್ತಗೊಂಡ
ಭವ್ಯ ಸೂರ್ಯ ಅಗ್ನಿಯಂತೆ ಕಂಗೊಳಿಪ
ನವ್ಯ ದಿವ್ಯವಾಗಿ ನಿನ್ನವಯುವಗಳನೆಲ್ಲ
ದಿವ್ಯಲಂಕೃತ ಗೊಳಿಸಿ ತೃಪ್ತಿ ಪಡುವೆ ||

## (೯) ಯಜ್ಞೋಪವಿತ (ಜನಿವಾರ)

(ಜನಿವಾರ ಅರ್ಪಿಸುವೆನೆಂದು ತುಳಸಿ ದಳವನ್ನು ಅರ್ಪಿಸಿರಿ)

ಮೂರು ವೇದಂಗಳ ಪ್ರತಿಕ ಎಂದೆನಿಪ
ಚಾರು ಗಾಯತ್ರಿ ಗ್ರಂಥಿ ಇರುವ
ಪರಮ ಮಂಗಳವೆನಿಪ ಜನಿವಾರವನ್ನು ನಾ
ಅರ್ಪಿಸುವೆ ಧರಿಸಿದನು ದಿವ್ಯತೇಜ ||

## (೧೦) ಆಸನ

ಸರುವ ಜೀವಿಗಳಿಗೆ ಹಿತ ನೀಡಲೋಸುಗ
ಸರುವ ಶೋಭನ ಪೀಠದೊಳಗೆ ನೀನು
ಕರಣಿಕಾ ಪೀಠದಲಿ ಪದ್ಮ ಕಲ್ಪಿತವಾದ
ಸಿರಿ ಪೀಠದಲಿ ನಿನ್ನ ಕೂಡಿಸುವೆ, ಶೋಭಿಸು ||

## (೧೧) ಗಂಧ ಸಮರ್ಪಣೆ

(ದೇವರಿಗೆ ಗಂಧ ಅಕ್ಷತೆಯನ್ನು ಸಮರ್ಪಿಸಿರಿ)

ದೇವನೇ ನಿನ್ನಯ ಶರೀರ ಎಂತಿದೆಯೋ
ದೇವನೆ ನಿನ್ನಯ ಚೇಷ್ಟೆ ಎಂತಹುದೋ
ಪಾವನ ಕಾಯನೆ ಲೌಕಿಕದಿ ನಾನೀವ
ದಿವ್ಯ ಗಂದಾಕ್ಷತೆ ಸ್ವೀಕರಿಸು ದೇವ ||

## (೧೨) ಪುಷ್ಪಗಳ ಸಮರ್ಪಣೆ (ಪುಷ್ಪಗಳಿಂದ ಅರ್ಚನೆ)

(ದೇವರಿಗೆ ತುಳಸಿ, ನಾನಾವಿಧ ಸುವಾಸಿತ ಪುಷ್ಪಗಳನ್ನು ಸಮರ್ಪಿಸಿರಿ)

ಬಹುರೂಪ ಉಳ್ಳಂಥ ಬಹುವರ್ಣ ಉಳ್ಳಂಥ
ಬಹು ಸುಗಂಧವನುಳ್ಳ ಚಲು ಪುಷ್ಪಗಳನು
ಬಹು ಪ್ರೀತಿಯಿಂದಲಿ ನಿನಗಾಗಿ ತಂದಿಹೆನು
ಸಹನೆಯಿಂ ಸ್ನೇಹದಿಂ ಸ್ವೀಕರಿಸು ಇವನು ||

## (೧೩) ಧೂಪ ಸಮರ್ಪಣೆ

(ಘಂಟಾನಾದ ದೊಂದಿಗೆ ಧುಪಾರತಿ ಎತ್ತಿರಿ)

ವಿವಿಧ ವನಸ್ಪತಿಯಿಂದ ಉದ್ಭವಿಸಿದ ಧೂಪ
ಜವಾದಿ ಆಘ್ರಾಣಿಸಲು ಯೋಗ್ಯವಿಹುದು
ಸವಿನಯ ಭಾವದಿಂ ನಿನಗರ್ಪಿಸುವೆ ಇದನು
ತವಕದಲಿ ಸ್ವೀಕರಿಸು ಸಿರಿ ನಾರಸಿಂಹ ||

## (೧೪) ದೀಪದಾರತಿ

(ಘಂಟಾ ನಾದದಿಂದ ಮೂರು ಬತ್ತಿಗಳ ಮಂಗಳಾರತಿ ಮಾಡಿರಿ )

ಮೂರು ಬತ್ತಿಗಳಿಂದ ಯುಕ್ತದ ಘೃತ ದೀಪ
ಧಾರುಣಿ ಬೆಳಗುವೆನೆ ನಿನಗೆ ಮುಡಿಪೆ
ಹರಡಿರುವ ತಿಮಿರವನು ತ್ವರದಿಂದ ಪರಿಹರಿಸು
ಪರಮಾತ್ಮನೇ ಎಂದು ಬೇಡಿಕೊಳುವೆ ||

## (೧೫) ನೈವೇದ್ಯ ಸಮರ್ಪಣೆ

(ಭಕ್ಶ್ಯ , ಭೋಜ್ಯ ಹಾಲು, ಫಲ, ತಾಂಬೂಲ, ಬೇರೆ ಬೇರೆ ಯಾಗಿಟ್ಟು ಸಮರ್ಪಿಸಿರಿ)

ನಾನಾ ವಿಧ ಭಕ್ಷ ಭೋಜ್ಯಾದಿಗಳು ಎಂದು
ನನಗೆ ಸಾಧ್ಯವು ಇಹುದ ನಿನಗರ್ಪಿಪೆ
ವಿನಿತ ಭಾವದಿ ಕೊಟ್ಟ ನೈವೇದ್ಯ ಸ್ವಿಕರಿಸಿ
ಘನವೆಂದು ತಿಳಿಯೊನೀ  ಮನ್ನಿಸುತಲಿ ||

ತರತರದ ಫಲಗಳ ನಿನಗೀವೆ ಶ್ರೀಹರಿಯೇ
ಸಾರ ಪರಿಮಳಯುಕ್ತ ತಾಂಬೂಲವೀವೆ
ಗರುವರಹಿತನೆ ಭಕುತಿಯಿಂದಲಿ ನಾನಿತ್ತು
ದೆಲ್ಲವನು ಪ್ರೀತಿಯಲಿ ಸ್ವೀಕರಿಸು ದೇವ ||

## ಮಹಾನಿರಾಜನ

(ದೇವರಿಗೆ ಮಹಾಮಂಗಳಾರತಿ ಮಾಡಬೇಕು)

ಮಂಗಳ ಮೂರ್ತಿಗೆ ಮಂಗಳಾರತಿ ಎತ್ತಿ
ಕಂಗಳ ಅಂಗಳದಿ ತುಂಬಿ ಕೊಳುವೆ
ಭಂಗ ಬಾರದಂತೆಯೇ ಜನ್ಮ ಜನ್ಮಾಂತರದಿ
ಸಂಗ ಸುಖ ವನ್ನೀಯೆ ಬೇಡಿಕೊಳುವೆ ||

ಅಣೋರಣಿಯನಿಗೆ ಮಹತೋಮಹೀಯಗೆ
ತೃಣಕಾಷ್ಟ ಪರಿಪೂರ್ಣ ಗೋವಿಂದಗೆ,
ಘನ ಮಹಿಮ ಕನಕಗಿರಿ ವಾಸ ಶ್ರೀ ನರಹರಿಗೆ
ಪುನ: ಪುನ: ನಾ ನಮಿಸಿ ನಾ ಬೆಳಗುವೆ ||

## ಮಂತ್ರ ಪುಷ್ಪ

ನಿನ್ನ ಅದ್ಭುತ ಶಕುತಿಯಿಂದಲೀ ವಿಶ್ವವನು
ನಿನ್ನ ವಶದಲಿ ಇರಿಸಿಕೊಂಡಿರುವ ದೇವ,
ನಿನ್ನನಂತ ಮಹಿಮೆ ನಾನೆಷ್ಟು ತಿಳಿದೇನು
ನಿನಗಿದೋ ಮಂತ್ರ ಪುಷ್ಪ ಗಳನರ್ಪಿಪೆ ||

## ಛತ್ರ ಚಾಮರ ಇತ್ಯಾದಿ ಸಮರ್ಪಣೆ

ಛತ್ರ ಚಾಮರ ವ್ಯಜನ ದರ್ಪಣ ಗೀತೆಗಳು
ನೃತ್ಯ, ವಾದ್ಯ ಸ್ತೋತ್ರ ಇತ್ಯಾದಿಗಳನು ,
ಭೃತ್ಯ ನಾನರ್ಪಿಸುವೆ ರಾಜೋಪಚಾರವಿದ
ಕೃತ ಕೃತ್ಯ ನೆನಿಸೆನ್ನ ಸ್ವಿಕರಿಸಿ ಜವದಿ ||

## ಶಂಖ ಭ್ರಮಣ

ಪವಿತ್ರ ಜಲ ತುಳಸಿ ಶಂಖದಲಿ ಶೇಖರಿಸಿ
ದಿವ್ಯ ಅಷ್ಟಾ ಕ್ಷರದ ಮಂತ್ರ ಜಪಿಸುತಲಿ
ದೇವ ನಿನ್ನಯ ಬಿಂಬ ಛಾಯೆಯ ದೋಷದ
ಪರಿಹಾರಕೆಂದಿದೊ ಭ್ರಮಣ ಮಾಳ್ಪೆ ||

## (೧೬) ನಮಸ್ಕಾರ

ಅಂತ: ಚಕ್ಷುವಿನೆದುರು ನಿಂತ ಹೇ ದೇವ
ಅಂತರಂಗದಿ ಕುಳಿತು ನಡೆಸುವನು ನೀನೇ,
ಗತಿ ಶಕ್ತಿ ಪ್ರಾಣಿಮಿಗೆ ಚೇತನನು ನೀನೇ
ನುತಿಸಿ ನಾ ಗೈಯುವೆ ನಿನಗಿದೋ ನಮನಂ ||

ಜನುಮ ಜನುಮಗಳಲ್ಲಿ ಗೈದಿಹ ಪಾಪಗಳ
ನಾನಿಡುವ ಹೆಜ್ಜೆ ಹೆಜ್ಜೆಗೂ ನಾಶವನು
ಘನ ಮಹಿಮ ನಿಗಿವೆ, ಎಂದರಿತು ನಮಿಪೇನು
ಸಾನುರಾಗದಿ ಹರೆಸಿ ಪೊರೆಯೊ ನರಹರಿಯೆ ||

## ರಾಮಾ, ಬ್ರಹ್ಮ , ಋಷಿ, ಗುರು ದಾಸರಿಗೆ ನೈವೇದ್ಯ ಸಮರ್ಪಣೆ

ಶ್ರೀ ರಮಾ ಬ್ರಹ್ಮಾದಿ ದೇವತೆಗಳೇ ನಿಮಗೆ
ವರ ಸನಕಾದಿ ಶುಕ ಋಷಿಗಳೇ ನಿಮಗೆ
ಪರಮ ವಿಷ್ಣು ಭಕ್ತ ಗುರುಗಳು, ದಾಸರಿಗೆ
ನರಹರಿ ಪ್ರಸಾದವನು ಸ್ವಿಕರಿಸೆ ಬೇಡುವೆ ||

## ಸರ್ವ ಸಮರ್ಪಣೆ

ನಾನೇನು ಮಾಡುವೆ ನೀನೇ ಮಾಡಿಪುದೆಲ್ಲ
ನಾನೇನು ನುಡಿಯುವೆ ನೀನೇ ನುಡಿಸುವುದೆಲ್ಲ
ನಾನೇನು ಅರ್ಪಿಸೆ ನೀನೇ ಇತ್ತಿಹುದೆಲ್ಲ
ನಾನು ಬರಿ ಅಧಿನ ನಾನೇ ನಿನಗರ್ಪಣೆ ||

ಜನುಮ ಜನುಮದಿ ನಿನ್ನ ಘನ ದಾಸನೆಂದೆನಿಸು |
ಜನುಮ ಜನುಮದಿ ಎನ್ನನ ಮನವಾಸನೆಂದೆನಿಸು
ಜನುಮ ಜನುಮದಿ ನಿನ್ನ ಧ್ಯಾನಿಸಿ ಪೂಜಿಸಿ |
ಜನುಮ ಮರಳದ ಮೋಕ್ಷ ಪದವಿ ದಯಪಾಲಿಸು.

## ಶ್ರೀ ಕೃಷ್ಣಾರ್ಪಣ ಮಸ್ತು